## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಪ್ರಾಥಮಿಕ ಶಾಲಾ ಶಿಕ್ಷಕರ ವರ್ಗಾವಣೆ ಬಗ್ಗೆ.

ಓದಲಾಗಿದೆ: 1. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಏಕ ಕಡತ ಸಂಖ್ಯೆ:ಸಿ3(7)ಪ್ರಾ.ಶಿ.ವರ್ಗ-07/2017-18 ದಿನಾಂಕ:23-08-2018

ಪ್ರಸ್ತಾವನೆ:

ಮೇಲೆ ಓದಲಾದ ಏಕ ಕಡತದ ಪ್ರಸ್ತಾವನೆಯಲ್ಲಿ 'ಕರ್ನಾಟಕ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ನಿಯಮ 2017ರ ನಿಯಮ 4ರ ಪ್ರಕಾರ ಎರಡು ವರ್ಷಕ್ಕೊಮ್ಮೆ ವರ್ಗಾವಣೆಗೂ ಮುಂಚಿತವಾಗಿ ಹೆಚ್ಚುವರಿ ಶಿಕ್ಷಕರ ಮರುನಿಯುಕ್ತಿಗೊಳಿಸುವ ಕ್ರಮಗಳನ್ನು ಕೈಗೊಳ್ಳಬೇಕಾಗಿದ್ದು, 2018-19ನೇ ಸಾಲಿನ ಹೆಚ್ಚುವರಿ ಶಿಕ್ಷಕರ ಮರುನಿಯುಕ್ತಿ ಕ್ರಮಗಳನ್ನೊಳಗೊಂಡಂತೆ ಸಮಗ್ರ ಪರಿಷ್ಕೃತ ಮಾರ್ಗಸೂಚಿಗಳು ಹಾಗೂ ವೇಳಾಪಟ್ಟಿಯನ್ನೊಳಗೊಂಡ ಜ್ಞಾಪನವನ್ನು ಪರಿಷ್ಕರಿಸಿ ಹೊರಡಿಸಲು, ಹೆಚ್ಚುವರಿ ಶಿಕ್ಷಕರ ಮರುನಿಯುಕ್ತಿ ಪ್ರಕ್ರಿಯೆಗೆ ಹೆಚ್ಚುವರಿ ನೀತಿ ಅಂಶಗಳನ್ನು ಪ್ರಸ್ತಾಪಿಸಿ, ದಿನಾಂಕ :24-08-2018ರಂದು ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರ ಸಮಕ್ಷಮದಲ್ಲಿ ಚರ್ಚಿಸಿದಂತೆ 2016-17ರಲ್ಲಿ ನೀಡಲಾದ ವಿನಾಯಿತಿ ಆದೇಶಗಳಲ್ಲಿನಂತೆ ಮಲೆನಾಡು ಪ್ರದೇಶದ ಶಿವಮೊಗ್ಗ ಜಿಲ್ಲೆ, ಹಾಸನ ಜಿಲ್ಲೆ, ಚಿಕ್ಕಮಗಳೂರು ಜಿಲ್ಲೆ, ಕೊಡಗು ಜಿಲ್ಲೆ, ಶಿರಸಿ (ಶೈಕ್ಷಣಿಕ ಜಿಲ್ಲೆ), ಉತ್ತರ ಕನ್ನಡ ಜಿಲ್ಲೆ, ದಕ್ಷಿಣ ಕನ್ನಡ ಜಿಲ್ಲೆ, ಉಡುಪಿ ಜಿಲ್ಲೆ, ಬೆಳಗಾವಿ ಜಿಲ್ಲೆಗಳಲ್ಲಿನ ಮಲೆನಾಡು ಪ್ರದೇಶದ ವ್ಯಾಖ್ಯಾನಕ್ಕೆ ಒಳಪಡುವ ವಲಯಗಳಿಗೆ ವಿನಾಯಿತಿ ನೀಡುವಂತೆ ಕೋರಿರುವುದನ್ನು ಪರಿಶೀಲಿಸಲಾಗಿದೆ.

ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರನ್ನು ವಿದ್ಯಾರ್ಥಿ : ಶಿಕ್ಷಕರ ಅನುಪಾತದೊಳಗೆ ಪರಿಗಣಿಸದೆ ಹೆಚ್ಚುವರಿ ಪ್ರಕ್ರಿಯೆಯಿಂದ ಕೈಬಿಡಲು ಇರುವ ಕೋರಿಕೆ ಸಾಧುವಾಗಿರುವುದಿಲ್ಲ ಎಂಬ ಇಲಾಖಾ ಅಭಿಪ್ರಾಯವನ್ನು ಹಾಗೂ 2017-18, 2018-19ನೇ ಶೈಕ್ಷಣಿಕ ಸಾಲುಗಳ ದಾಖಲಾತಿಗಳನ್ನು ತಾಳೆ ಮಾಡಿ, ಆ ಪೈಕಿ ಹೆಚ್ಚಿನ ಸಂಖ್ಯೆಯನ್ನು ಪರಿಗಣಿಸಿ ಹೆಚ್ಚುವರಿ ಪ್ರಕ್ರಿಯೆಯನ್ನು ಹಮ್ಮಿಕೊಳ್ಳಬಹುದಾಗಿದೆ ಎಂಬ ಅಂಶವನ್ನು ಮತ್ತು ಎಸ್.ಎ.ಟಿ.ಎಸ್ ಅಂಕಿ ಅಂಶಗಳ ಆಧಾರದಲ್ಲಿ ಶಾಲಾವಾರು ಹುದ್ದೆಗಳ ಅವಶ್ಯಕತೆ ಮತ್ತು ಹೆಚ್ಚುವರಿ ಶಿಕ್ಷಕರ ಗುರುತಿಸುವಿಕೆಗೆ ತಾಂತ್ರಿಕ ಕಾರಣಗಳಿಗಾಗಿ ಸ್ವಲ್ಪ ಕಾಲಾವಕಾಶದ ಅಗತ್ಯತೆ ಇದೆ ಎಂಬುದಾಗಿ ಇಲಾಖೆಯಿಂದ ಸಲ್ಲಿಕೆಯಾಗಿರುವ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಇಡಿ 9 ಇಟಿಆರ್ 2018; ಬೆಂಗಳೂರು, ದಿನಾಂಕ:17/09/2018.**

ಈ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಈ ಕೆಳಕಂಡಂತೆ ಆದೇಶಿಸಿದೆ.

1. ಕಡ್ಡಾಯ ವರ್ಗಾವಣೆಗಳನ್ನು ಹಮ್ಮಿಕೊಳ್ಳುವಾಗ, ಮುಖ್ಯ ಶಿಕ್ಷಕರ ವೃಂದಕ್ಕೆ ಸಂಬಂಧಪಟ್ಟಂತೆ, ಸರ್ಕಾರಿ ಶಾಲೆಗಳಲ್ಲಿನ ಮುಖ್ಯ ಶಿಕ್ಷಕರ ವೃಂದದಲ್ಲಿ 10 ವರ್ಷ ಸೇವೆ ಸಲ್ಲಿಸಿರುವ ಪ್ರಕರಣಗಳನ್ನು ಮಾತ್ರ (ಪ್ರಭಾರ ಸಹ ಶಿಕ್ಷಕರನ್ನು ಹೊರತು ಪಡಿಸಿ) ಕಡ್ಡಾಯ ವರ್ಗಾವಣೆಗೆ ಪರಿಗಣಿಸತಕ್ಕದ್ದು.
2. ನಿಯಮಗಳಂತೆ 60-400 ವಿದ್ಯಾರ್ಥಿಗಳಿಗೆ ಒಬ್ಬ ಮುಖ್ಯ ಶಿಕ್ಷಕರು ಇರುವುದರಿಂದ ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ ಸಂಬಂಧಪಟ್ಟಂತೆ ಶೇಕಡವಾರು 60 ಕ್ಕಿಂತ ಕಡಿಮೆ ದಾಖಲಾತಿ ಇರುವ ಶಾಲೆಗಳಲ್ಲಿ ಮುಖ್ಯ ಶಿಕ್ಷಕರನ್ನು ಹೆಚ್ಚುವರಿ ಎಂದು ಗುರುತಿಸಿ ಪ್ರಕ್ರಿಯೆಯನ್ನು ಹಮ್ಮಿಕೊಳ್ಳುವುದು..

Scanned by CamScanner

3. ಮಲೆನಾಡು ಪ್ರದೇಶಗಳಿಗೆ 2016-17ನೇ ಸಾಲಿನ ಹೆಚ್ಚುವರಿ ಶಿಕ್ಷಕರ ಸ್ಥಳನಿಯುಕ್ತಿಯಲ್ಲಿ ಅಳವಡಿಸಿಕೊಂಡಿದ್ದ ನಿಯಮಗಳನ್ನು ಅಳವಡಿಸಿಕೊಳ್ಳುವುದು. (ಉತ್ತರ ಕನ್ನಡ ಜಿಲ್ಲೆ, ದಕ್ಷಿಣ ಕನ್ನಡ ಜಿಲ್ಲೆ, ಉಡುಪಿ ಜಿಲ್ಲೆಯ ಘಟ್ಟ ಪ್ರದೇಶ ಸೇರಿಸಿ)
4. ಕೊಡಗು ಜಿಲ್ಲೆಯಲ್ಲಿ ಅತಿವೃಷ್ಟಿಯಿಂದಾಗಿ ಮನೆ-ಮುಂಗಟ್ಟು, ಶಾಲೆ ಇತ್ಯಾದಿಗಳಿಗೆ ಅಪಾರ ಹಾನಿಯುಂಟಾಗಿದ್ದು ಪುನರ್ ವಸತಿ ಕಾರ್ಯಗಳು ಜರುಗುತ್ತಿದ್ದು ಇಂತಹ ಸಂದರ್ಭದಲ್ಲಿ ಕಡ್ಡಾಯ ಮತ್ತು ಹೆಚ್ಚುವರಿ ಶಿಕ್ಷಕರ ವರ್ಗಾವಣೆಗಳನ್ನು ಹಮ್ಮಿಕೊಂಡಲ್ಲಿ ಈಗಾಗಲೇ ಸಂಕಷ್ಟದಲ್ಲಿರಬಹುದಾದ ಶಿಕ್ಷಕರ ಬದುಕಿನ ಮೇಲೆ ಮತ್ತು ಜಾರಿಯಲ್ಲಿರುವ ಪುನರ್ ವಸತಿ ಕಾರ್ಯಗಳ ಮೇಲೆ ವ್ಯತಿರಿಕ್ತ ಪರಿಣಾಮಗಳಾಗಬಹುದಾಗಿದ್ದು ಮಾನವೀಯತೆ ದೃಷ್ಟಿಯಿಂದ 'ಪ್ರಕೃತಿ ವಿಕೋಪ ಕಾಯ್ದೆ'ಯಡಿ ಕೊಡಗು ಜಿಲ್ಲೆಯನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ ಕಡ್ಡಾಯ ಮತ್ತು ಹೆಚ್ಚುವರಿ ಪ್ರಕ್ರಿಯೆಯಿಂದ ಹೊರತುಪಡಿಸಲಾಗಿದೆ. ಆದರೆ, ಶಿಕ್ಷಕರ ಘಟಕದೊಳಗಿನ ಮತ್ತು ಘಟಕದ ಹೊರಗಿನ ಕೋರಿಕೆ ವರ್ಗಾವಣೆಗಳ ಅರ್ಜಿಗಳನ್ನು ಪರಿಗಣಿಸುವುದು.
5. 2017-18ನೇ ಸಾಲಿನ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರ ಮತ್ತು ತತ್ಸಮಾನ ಗ್ರೂಪ್ ಬಿ ವೃಂದದ ಅಧಿಕಾರಿಗಳ ಸಾಮಾನ್ಯ ವರ್ಗಾವಣೆಯನ್ನು ಗಣಕೀಕೃತ ಕೌನ್ಸಲಿಂಗ್ ಕುರಿತಂತೆ ಒಂದು ವೇಳೆ 'ಎ' ವಲಯಕ್ಕೆ ಯಾರೂ ಕೋರಿಕೆ ವರ್ಗಾವಣೆ ಮನವಿ ಮಾಡದೇ ಹೋದರೆ, ಉತ್ತಮ ದಾಖಲಾತಿ ಹೊಂದಿರುವ ಶಾಲೆಗಳ ಹಿತದೃಷ್ಟಿಯಿಂದ ಹಿಂದೆ ಇದ್ದವರನ್ನು ಬಿಡುಗಡೆ ಮಾಡಬಾರದು. ಇಲ್ಲವಾದಲ್ಲಿ ಶೈಕ್ಷಣಿಕ ಚಟುವಟಿಕೆಗಳಿಗೆ ಧಕ್ಕೆ ಉಂಟಾಗುತ್ತದೆ.
6. ಸಾಮಾನ್ಯವಾಗಿ ವರ್ಗಾವಣೆಗಳು ಏಪ್ರಿಲ್-ಮೇ ತಿಂಗಳುಗಳಲ್ಲಿ ಹಮ್ಮಿಕೊಳ್ಳಬೇಕಾಗಿದ್ದು ಪ್ರಸ್ತುತ ಸೆಪ್ಟೆಂಬರ್ ತಿಂಗಳು ನಡೆಯುತ್ತಿರುವುದರಿಂದ 2017-18ನೇ ವರ್ಷದಿಂದ 2018-19ನೇ ವರ್ಷಕ್ಕೆ ದಾಖಲಾತಿ ಹೆಚ್ಚಾದ ಶಾಲೆಗಳಲ್ಲಿ ಹೆಚ್ಚಿನ ದಾಖಲಾತಿಯನ್ನು ಪರಿಗಣಿಸಿ ಹೆಚ್ಚುವರಿ ಶಿಕ್ಷಕರನ್ನು ಗುರುತಿಸುವುದು ಅಲ್ಲದೇ ಕಡಿಮೆ ದಾಖಲಾತಿ ಇರುವ ಶಾಲೆಗಳನ್ನು ಕೌನ್ಸಿಲಿಂಗ್ ಖಾಲಿ ಪಟ್ಟಿಗಳಲ್ಲಿ ಸೇರಿಸಕೂಡದು.

ಮೇಲ್ಕಂಡ ಅಂಶಗಳಿಗೆ ಅನುಗುಣವಾಗಿ ವರ್ಗಾವಣೆ ವೇಳಾಪಟ್ಟಿಯನ್ನು ಹಮ್ಮಿಕೊಂಡು ಸೆಪ್ಟೆಂಬರ್ 2018ರೊಳಗೆ ವರ್ಗಾವಣೆಗಳನ್ನು ಪೂರೈಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಹೆಚ್.ಎಂ. ರಾಘವೇಂದ್ರ)
ಸರ್ಕಾರದ ಅಧೀನ ಕಾರ್ಯದರ್ಶಿ,
(ಪ್ರಾಥಮಿಕ ಶಿಕ್ಷಣ) ಶಿಕ್ಷಣ ಇಲಾಖೆ

ಇವರಿಗೆ:

1. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
2. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ.
3. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ.
4. ನಿರ್ದೇಶಕರು [ಪ್ರಾಥಮಿಕ ಶಿಕ್ಷಣ], ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
5. ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ [ವೆಚ್ಚ-08], ವಿಧಾನಸೌಧ, ಬೆಂಗಳೂರು.
6. ಮಾಹಿತಿ ಕೇಂದ್ರ, [ವೆಬ್‌ಸೈಟ್ ನಲ್ಲಿ ಪ್ರಕಟಿಸಲು]
7. ಶಾಖಾರಕ್ಷಾ ಕಡತ/ಹೆಚ್ಚುವರಿ ಪ್ರತಿ.

Scanned by CamScanner